ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಈಗ ಹುಬ್ಬಳ್ಳಿ ಮತ್ತು ಕಲಘಟಗಿ ತಾಲ್ಲೂಕುಗಳಲ್ಲಿರ ತಕ್ಕ ಕೆರೆಗಳಲ್ಲಿ ನೀರನ್ನು ಉಪಯೋಗ ಮಾಡದೆ ಇದ್ದರೂ ನೀರು ತೆರಿಗೆಯನ್ನು ಹಾಕಿದ್ದಾರೆ ಎಂದು ಹೇಳಿದ್ದೀರಿ. ಇದೇ ರೀತಿ ಮೈಸೂರು ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲೂ ಕೆರೆಗಳಲ್ಲಿ ನೀರು ಇಲ್ಲದೇ ಇದ್ದರೂ ನೀರು ತೆರಿಗೆಯನ್ನು ಹಾಕುವುದು ಬಹಳ ವರ್ಷಗಳಿಂದ ಇದೆ. ಆದ್ದರಿಂದ ಎಲ್ಲೆಲ್ಲಿ ಕೆರೆಗಳಲ್ಲಿ ನೀರು ಇಲ್ಲದೆ ಇದ್ದರೂ ನೀರು ತೆರಿಗೆಯನ್ನು ವಿಧಿಸಿರುತ್ತಾರೆ ಎನ್ನುವುದನ್ನು ವಿಚಾರ ಮಾಡುವುದಕ್ಕೆ ಸರ್ಕಾರದವರು ಏನು ಮಾಡಿದ್ದೀರಿ ?

ಶ್ರೀ ಎ. ಜೆ. ದೊಡ್ಡಮೇಟಿ.—ಈ ಬಗ್ಗೆ ಬೇರೆ ಬೇರೆ ಕಡೆಗಳಿಂದ ತಕರಾರುಗಳು ಬಂದಿವೆ. ಆದರೆ ಆ ತಕರಾರುಗಳ ಸತ್ಯಸ್ವರೂಪ ಏನು ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಎಲ್ಲಾ ತಕರಾರುಗಳೂ ಸತ್ಯವಾಗಿರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಪ್ರತಿಯೊಂದು ಕ್ಷೇತ್ರ ದಿಂದಲೂ ತಕರಾರುಗಳು ಪ್ರತ್ಯೇಕವಾಗಿ ಬಂದರೆ ಅವುಗಳನ್ನು ಪ್ರತ್ಯೇಕವಾಗಿ ವಿಚಾರ ಮಾಡು ವುದಕ್ಕೆ ಆಸ್ಪದವಾಗುತ್ತದೆ.

P.P. School in Muddebihal Taluk

70. Sri S. M. GUREDDI (Muddebihal).—

Will the Minister for Education be pleased to state:—

(*a*) whether Government are aware that there is a P.P. School (ಗಾವಂಠಿ ಸ್ಕೂಲ್) in Talikoti Village of Muddebihal Taluk in Bijapur District;

(*b*) the reasons why grant-in-aid is not being given to the above school from the last four years ?

A.—Sri N. M. KOTRABASAIAH SOGI (Deputy Minister for Education).—

(*a*) Yes.

(*b*) The qualification of the Headmaster-*cum*-Manager and the identity of the incumbent have formed the subject matter of litigation in Courts.

ಶ್ರೀ ಎಸ್. ಎಂ. ಗುರೆಡ್ಡಿ.—ಸ್ವಾಮಿ, ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿ ನಲ್ಲಿರುವ ತಾಳೀಕೋಟೆ ಗ್ರಾಮದಲ್ಲಿರುವ ಗ್ರಾಮೀಣ ಶಾಲೆಯ ಮುಖ್ಯೋಪಾಧ್ಯಾಯ ಹಾಗೂ ನಿರ್ವಾಹಕರ ವಿದ್ಯಾರ್ಹತೆ ಮತ್ತು ನದರಿ ಹುದ್ದೆಯಲ್ಲಿರುವವರ ವ್ಯಕ್ತಿತ್ವಕ್ಕೆ ಸಂಬಂಧಿಸಿದ ವಿಷಯ ನ್ಯಾಯಾಲಯಗಳಲ್ಲಿನ ಮೊಕದ್ದಮೆಯ ವಿಷಯವಾಗಿರುವುದರಿಂದ ಸಹಾಯಕ ಅನುದಾನವನ್ನು ಕೊಟ್ಟಿರುವುದಿಲ್ಲ ಎಂದು ಹೇಳಿದ್ದೀರಿ, ಹಾಗಾದರೆ ಆ ಶಿಕ್ಷಕರಿಗೆ 4 ವರ್ಷಗಳಿಂದ ಸಂಬಳ ಇಲ್ಲ ಎಂದರೆ ಅವರು ಯಾವ ರೀತಿ ಉಪಜೀವನ ನಡೆಸಬೇಕು ಎಂಬುದನ್ನು ಹೇಳುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಅಲ್ಲಿಯ ಶಾಲೆಗೆ ಗ್ರಾಂಟ್ ಕೊಡುವ ವಿಚಾರದ ಬಗ್ಗೆ ಮ್ಯಾನೇಜ್‌ಮೆಂಟಿನವರೊಡನೆ ಜಗಳ ಮಾಡಿದ್ದೇವೆ. ಆ ಶಾಲೆಯ ಮ್ಯಾನೇಜ್‌ಮೆಂಟಿನವರು ಮತ್ತು ಉಪಾಧ್ಯಾಯರ ನಡುವೆ ಕೆಲವು ತಕರಾರುಗಳು ಬಂದು, ಅದು ಕೋರ್ಟಿಗೆ ಹೋಗಿದೆ. ಅದು ಕೋರ್ಟಿನಲ್ಲಿ ತೀರ್ಮಾನವಾಗದ ಹೊರತು ನಾವು ಗ್ರಾಂಟ್ ತೆಗೆದುಕೊಳ್ಳುವುದಿಲ್ಲ ಎಂದು ಆ ಶಾಲೆಯ ಮ್ಯಾನೇಜ್‌ಮೆಂಟಿನವರು ಗ್ರಾಂಟನ್ನು ಕ್ಲೈಮ್ ಮಾಡಿಲ್ಲ. ಆದ್ದರಿಂದ ಅದು ಸರ್ಕಾರದ ತಪ್ಪು ಅಲ್ಲ. ಅದು ಅವರ ತಪ್ಪು.

ಶ್ರೀ ಎಸ್. ಎಂ. ಗುರೆಡ್ಡಿ.—ಈಗ ಆ ಶಾಲೆಯಲ್ಲಿರತಕ್ಕ ಶಿಕ್ಷಕರೆಲ್ಲರೂ ಸಂಬಳ ಕೊಡಬೇಕೆಂದು ರೆಪ್ರೆಜೆಂಟೇಷನ್ ಕೊಟ್ಟಿದ್ದಾರೆ. ಈಗ ಸುಮಾರು 4 ವರ್ಷಗಳಿಂದಲೂ ಅವರು ಸಂಬಳವಿಲ್ಲದೆ ಬಳಲುತ್ತಿದ್ದಾರೆ. ಅವರ ಸೀನಿಯಾರಿಟಿ ವಿಚಾರ ಕೋರ್ಟಿಗೆ ಹೋಗಿರಬಹುದು. ಆದರೆ ಆ ಶಿಕ್ಷಕರಿಗೆ ಪಗಾರ ಏತಕ್ಕೆ ಕೊಟ್ಟಿಲ್ಲ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದು ಪ್ರೈವೇಟ್ ಪ್ರೈಮರಿ ಸ್ಕೂಲು. ಆ ಸ್ಕೂಲಿನ ಶಿಕ್ಷಕರಿಗೆ ಸಂಬಳ ಕೊಡುವುದು ಅವರ ಜವಾಬ್ದಾರಿ. ಅದು ಸರ್ಕಾರದ ಜವಾಬ್ದಾರಿ ಅಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗ ಸರ್ಕಾರದವರು ಕೊಟ್ಟಂತಹ ಗ್ರಾಂಟಿನಿಂದ ಆ ಶಿಕ್ಷಕರಿಗೆ ಪಗಾರವನ್ನು ಕೊಡುತ್ತಿದ್ದರು. 4 ವರ್ಷಗಳಿಂದ ಅವರಿಗೆ ಪಗಾರ ಕೊಟ್ಟಿಲ್ಲ. ಅದನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಾನು ಈಗಾಗಲೇ ಈ ಪ್ರಶ್ನೆಗೆ ಉತ್ತರವನ್ನು ಹೇಳಿದ್ದೇನೆ. ಆ ಶಾಲೆಯ ಮ್ಯಾನೇಜ್‌ಮೆಂಟಿನವರು ಗ್ರಾಂಟ್ ಕ್ಲೈಮ್ ಮಾಡಿಲ್ಲ. ಸರ್ಕಾರದವರು ಗ್ರಾಂಟ್ ಕೊಟ್ಟಿಲ್ಲ. ಈಗ ಅಲ್ಲಿ ಒಂದು ಸ್ಕೂಲ್ ಬೋರ್ಡ್ ಶಾಲೆಯನ್ನು ಪ್ರಾರಂಭ ಮಾಡಬೇಕೆಂಬ ವಿಚಾರ ಸರ್ಕಾರಕ್ಕೆ ಇದೆ.

10-00 A.M.

ಶ್ರೀ ಎಸ್. ಎಂ. ಗುರೆಡ್ಡಿ.—ಈ ತಾಲ್ಲೂಕಿನಲ್ಲಿ ಸುಮಾರು 15 ಸಾವಿರಕ್ಕೆ ಮೇಲ್ಪಟ್ಟು ಜನಸಂಖ್ಯೆ ಇದೆ. ಇಲ್ಲಿ ತಾಲ್ಲೂಕು ಬೋರ್ಡು ಸ್ಕೂಲು ಮಾಡುವುದಾದರೆ ಇಲ್ಲಿರುವ 50 ಟೀಚರುಗಳನ್ನೂ ಅಲ್ಲಿ ನೇಮಕ ಮಾಡುತ್ತೀರಾ ? ಮತ್ತು ಇದುವರೆಗೆ ಗ್ರಾಂಟು ಸರಕಾರ ಕೊಡದೇ ಇರುವುದರಿಂದ ಇಲ್ಲಿನ ಟೀಚರುಗಳಿಗೆ ಪಗಾರ ಸಿಗದೆ ತೊಂದರೆಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇಲ್ಲಿ ಇರುವ ಶಾಲೆಯನ್ನು ಮುಚ್ಚಿ ಇಲ್ಲಿ ಹೊಸದಾಗಿ ಸ್ಕೂಲು ಬೋರ್ಡು ಶಾಲೆಯನ್ನು ತೆರೆಯಬೇಕು ಎಂದು ಇದಕ್ಕೆ ಈಗಾಗಲೇ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಧಾರವಾಡದಲ್ಲಿರುವ ಡಿ.ಡಿ.ಪಿ.ಐ.ಗೆ ಸೂಚನೆಗಳನ್ನು ಕೂಡ ಕೊಡಲಾಗಿದೆ.

Irrigation and Drainage Research Sub-Division, Mandya

71. Sri N. A. CHANNE GOWDA (Pandavapur).—

Will the Minister for Public Works be pleased to state :—

(*a*) when the No. 1 Irrigation and Drainage Research Sub-Division, Mandya was started;

(*b*) the objects of the Government in starting this Sub-Division and the amount spent;

(*c*) the objects achieved so far;

(*d*) the area investigated improved by the Sub-Division;

(*e*) whether there is a proposal to shift the Sub-Division to another place ?